ಗ್ರಂಥ ಸಿದ್ಧಪಡಿಸಿದಾಗ ಅದಕ್ಕೆ 'ಸುಮನಸ' ಎಂದು ಹೆಸರಿಟ್ಟುದು ಬಲು ಯೋಗ್ಯವಾದುದೇ ಆಗಿತ್ತು.

ತೀರ್ಥಹಳ್ಳಿಯ ಸುತ್ತಮುತ್ತಲಿನ ಹಸಿರು ಪರಿಸರ, ತುಂಗೆಯ ನಿಧಾನದ ಹರಿವಿನ ವಾತಾವರಣದಿಂದ ಬಂದ ಗ್ರಾಮೀಣ ಪ್ರತಿಭೆ ಉಡುಪರು. ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಹಾಗೂ ಸಾಹಿತ್ಯಿಕವಾಗಿ ತನ್ನದೇ ಢಾಳಾದ ಛಾಪು ಮೂಡಿಸಿದ ಹಿನ್ನೆಲೆಯಲ್ಲಿ ಉಡುಪರದು ಮಾತ್ರ ಸದ್ದಿಲ್ಲದ ತನ್ನದೇ ಆದ ಮೆದು ಹೆಜ್ಜೆಗಳ ದಾರಿ. ಬಡತನವನ್ನೇ ಹಾಸಿಹೊದ್ದು ಜೀವನದ ಹೆಜ್ಜೆಹಾಕಿದ ಅವರು, ಸ್ವಂತ ಪರಿಶ್ರಮದಿಂದ, ತಮ್ಮ ಒಲವಿನ ಓದು–ಅಧ್ಯಯನದ ಬಲದಿಂದ ಮೇಲೆ ಬಂದವರು. ಕೋಣಂದೂರಿನ ರಾಷ್ಟ್ರೀಯ ಶಾಲೆಯಲ್ಲಿ ವಿಜ್ಞಾನ ಪ್ರಾಧ್ಯಾಪಕ ವೃತ್ತಿಯಲ್ಲಿ ಕೆಲ ವರ್ಷ ಕಳೆದ ಅವರು ನಂತರ ಇಂಗ್ಲಿಷ್ ಉಪನ್ಯಾಸಕಾರರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ ತಮ್ಮ ವೃತ್ತಿ ಜೀವನ ನಡೆಸಿದರು. ಅವರಲ್ಲಿ ವಿದ್ವತ್ತಿನ ಹಂಬಲ ಇರುವಹಾಗೆ ಸೃಜನಶೀಲ ಬರವಣಿಗೆಯ ವಾಂಛೆಯೂ ಸಹಜವಾಗಿಯೇ ಬೆರೆತುಕೊಂಡು ಬಂದುದು.

'ವೈನತೇಯ' ಎನ್ನುವ ಹೆಸರಿನಲ್ಲಿ ಮೊದಲ ಆಕರ್ಷಣೆಯಾಗಿ ಕವಿತೆಗಳನ್ನೇ ಬರೆದ ಉಡುಪರು, ಆ ಕವಿತೆಗಳ ಸಂಕಲನಕ್ಕೆ ಇಟ್ಟ ಹೆಸರು 'ನಾಲ್ಕು ಸಾಲು' ಎಂದು. 'ಮಲಗಿದೆ ಮಾತು, ಮುಗುಳಾಗಿ, ಮೊಗ್ಗಾಗಿ/ ನೂರು ದಳಗಳ ಮುಚ್ಚಿ, ಕನಸಿನಲ್ಲಿ/ ಸುಮನಸ ವಸಂತ ಮಂದಾನಿಲ ಸ್ಪರ್ಶಕ್ಕೆ/ ಅರಳಲದು ಸುತ್ತಲೂ ಕಂಪ ಚೆಲ್ಲಿ!', 'ಬೆಳಕು ಬೆಳೆಯದ ಬರಿಯ ಮಾತು ಮಾತೇ' (ಮಾತು ಮತ್ತು ಮೌನ) ಎನ್ನುವಂಥ ಅವರ ಎದೆಯೊಳಗಿನ ದನಿಯೇ ಅಲ್ಲಿ ಕೇಳಿದುದು. ಮುಂದೆಲ್ಲ ಗುಪ್ತಗಾಮಿನಿಯಾಗಿ ಹರಿದ ಈ ಸರಸ್ವತಿ ನದಿ ಮತ್ತೆ ಉದ್ಭವವಾದುದು ನಿವೃತ್ತಿಯ ನಂತರವೇ, ಅದೂ ಸಂಪೂರ್ಣ ಮಕ್ಕಳ ನಿಷ್ಕಲ್ಮಶ ಲೋಕವನ್ನೇ ತನ್ನದಾಗಿಸಿಕೊಂಡು.

ಸಾಹಿತ್ಯದ ವಿಸ್ತೃತ ಓದು, ಅಧ್ಯಯನ ಅವರ ಬರವಣಿಗೆಯನ್ನು ಪುಷ್ಟಿಗೊಳಿಸುವುದರ ಜೊತೆಗೆ ಅವರ ಸೂಕ್ಷ್ಮದ ಸ್ವಭಾವ ಆ ಬರಹಕ್ಕೆ ಸಜ್ಜನಿಕೆಯ ಮೇರೆಗಳನ್ನೂ ಹಾಕಿಕೊಂಡಿತ್ತು.



ಸಂಗಾತಿಯೊಂದಿಗೆ ಕವಿ ಶ್ರೀನಿವಾಸ ಉಡುಪ